## Andolana

Date: 19-11-2020 Page No: 04

Edition: Mysore Language: Kannada

# ಎನ್‌ಇಪಿ ಸಮಗ್ರತಾ ದೃಷ್ಟಿ ಹೊಂದಿದೆ: ಪ್ರೊ.ಆರ್.ಇಂದಿರಾ

ಮೈಸೂರು: ಕೇಂದ್ರ ಸರ್ಕಾರ ಜಾರಿಗೊಳಿಸಿರುವ ರಾಷ್ಟ್ರೀಯ ಶಿಕ್ಷಣ ನೀತಿಯು ಬಹು ವಿಷಯಗಳು, ಪರಸ್ಪರ ಕಲಿಕೆ ಮತ್ತು ಇತರೆ ವಿಷಯಗಳಿಗೆ ಗೌರವ ತಂದು ಕೊಡುವ ಸಮಗ್ರತಾ ದೃಷ್ಟಿಯಿಂದ ಕೂಡಿದೆ ಎಂದು ಸಮಾಜಶಾಸ್ತ್ರಜ್ಞರಾದ ಪ್ರೊ.ಆರ್.ಇಂದಿರಾ ಅಭಿಪ್ರಾಯಪಟ್ಟರು.



ಎಸ್‌ಡಿಎಂಐಎಂಡಿ ಸಂಸ್ಥೆಯು ಉನ್ನತ್ ಭಾರತ್ ಅಭಿಯಾನ್ (ಯುಬಿಎ) ಶೀರ್ಷಿಕೆಯಡಿ ಆಯೋಜಿಸಿದ್ದ 'ರಾಷ್ಟ್ರೀಯ ಶಿಕ್ಷಣ ನೀತಿಯಿಂದ ಉನ್ನತ ಶಿಕ್ಷಣದ ಮೇಲೆ ಆಗಲಿರುವ ಪರಿಣಾಮ' ಕುರಿತು ಮಾತನಾಡಿ, ಸಮಗ್ರ ಉನ್ನತ ಶಿಕ್ಷಣದ ಹಿತದೃಷ್ಟಿಯಿಂದ ಈ ನೀತಿಯನ್ನು ಅನುಷ್ಠಾನಗೊಳಿಸಲಾಗಿದೆ. ಇದು ಶಿಕ್ಷಣ ವ್ಯವಸ್ಥೆಯ ಸುಧಾರಣೆಗೆ ಕೈಗೊಳ್ಳಬಹುದಾದ ವಿಷಯಗಳನ್ನು ವಿವರಿಸುತ್ತದೆ ಎಂದರು.

ಎಸ್‌ಡಿಎಂ ಐಎಂಡಿ ನಿರ್ದೇಶಕ ಡಾ.ಎನ್.ಆರ್.ಪರಶುರಾಮನ್ ಮಾತನಾಡಿ, ವಿದ್ಯಾರ್ಥಿಗಳಲ್ಲಿ ಹೆಚ್ಚಿನ ಸಾಮಾಜಿಕ ಜಾಗೃತಿ ಮೂಡಿಸುವಲ್ಲಿ ಶಿಕ್ಷಣ ಸಂಸ್ಥೆಗಳು ಮಹತ್ವದ ಪಾತ್ರ ವಹಿಸುತ್ತವೆ ಎಂದರು. ಉಜಿರೆಯ ಎಸ್‌ಡಿಎಂ ಎಜುಕೇಷನಲ್ ಟ್ರಸ್ಟ್‌ನ ಕಾರ್ಯದರ್ಶಿ ಡಾ.ಬಿ.ಯಶೋವರ್ಮ, ಎಸ್‌ಡಿಎಂ ಐಎಂಡಿ ಉನ್ನತ್ ಭಾರತ್ ಅಭಿಯಾನದ ನೋಡೆಲ್ ಅಧಿಕಾರಿ ಡಾ.ಎಂ.ವಿ.ಸುನಿಲ್ ಮತ್ತಿತರರು ಭಾಗವಹಿಸಿದ್ದರು.

Talk by Dr. R. Indira on NEP 2020